**ಕರ್ನಾಟಕ ಸರ್ಕಾರ**

# ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ

# ವಾರ್ಷಿಕ ವರದಿ

## 2018-19

## ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆ

## 2018-19ನೇ ಸಾಲಿನ ವಾರ್ಷಿಕ ವರದಿ

### 1. ಸಾಂಸ್ಥಿಕ ಚೌಕಟ್ಟು

ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯು 1996ರ ಸೆಪ್ಟೆಂಬರ್‌ನಲ್ಲಿ ಸ್ಥಾಪನೆಯಾಯಿತು. ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯಲ್ಲಿ. ಈ ಕೆಳಕಂಡ ಹೇಳಲಾದ ಕಾರ್ಯಗಳ ಬಗ್ಗೆ ವ್ಯವಹರಿಸಲಾಗುತ್ತಿದೆ.

(ಎ) ರಾಜ್ಯದಲ್ಲಿ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದ (ಪಿಪಿಪಿ) ಆಧಾರದ ಮೇಲೆ ಮೂಲಸೌಲಭ್ಯ ಯೋಜನೆಗಳನ್ನು ಅಭಿವೃದ್ಧಿಪಡಿಸಲು ವಿವಿಧ ಇಲಾಖೆಗಳಿಗೆ ಮಾರ್ಗದರ್ಶನ ನೀಡುವುದು ಮತ್ತು ಪಿಪಿಪಿ ಮಾದರಿಯ ಅನುಷ್ಠಾನವನ್ನು ಸುಗಮಗೊಳಿಸುವುದು.

(ಬಿ) ರಾಜ್ಯದಲ್ಲಿ ವಿಮಾನ ನಿಲ್ದಾಣಗಳು ಮತ್ತು ಸಣ್ಣ ವಿಮಾನ ಚಲಿಸುವ ಪಥಗಳನ್ನು (ಏರ್‌ಸ್ಟ್ರಿಪ್ಸ್) ಅಭಿವೃದ್ಧಿಪಡಿಸುವುದು.

(ಸಿ) ರಾಜ್ಯದಲ್ಲಿ ರೈಲ್ವೆ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರದ ರೈಲ್ವೆ ಇಲಾಖೆಯೊಂದಿಗೆ ಸಮನ್ವಯ ಸಾಧಿಸುವುದು.

ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯು ಕರ್ನಾಟಕ ಸರ್ಕಾರದ ಸಚಿವಾಲಯದ ಒಂದು ಇಲಾಖೆಯಾಗಿದ್ದು, ಪ್ರಸ್ತುತ ಅಪರ ಮುಖ್ಯ ಕಾರ್ಯದರ್ಶಿಗಳು ಇಲಾಖೆಯ ಮುಖ್ಯಸ್ಥರಾಗಿರುತ್ತಾರೆ. ಇವರಿಗೆ ಓರ್ವ ಜಂಟಿ ಕಾರ್ಯದರ್ಶಿ, ಇಬ್ಬರು ಉಪ ಕಾರ್ಯದರ್ಶಿಗಳು ಮತ್ತು ಇಬ್ಬರು ಅಧೀನ ಕಾರ್ಯದರ್ಶಿಗಳು ನೆರವಾಗುತ್ತಾರೆ. ರಾಜ್ಯ ಪಿಪಿಪಿ ನೋಡಲ್ ಅಧಿಕಾರಿಯಾದ ಅಪರ ಮುಖ್ಯ ಕಾರ್ಯದರ್ಶಿಗಳು, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರ ಅಧೀನದಲ್ಲಿ "ಮೂಲಸೌಲಭ್ಯ ಯೋಜನೆಯಲ್ಲಿ **ಪಿಪಿಪಿ**ಯನ್ನು ಸುಗಮಗೊಳಿಸುವುದಕ್ಕಾಗಿ" ಭಾರತ ಸರ್ಕಾರದ ಬಾಹ್ಯ ವ್ಯವಹಾರಗಳ ಇಲಾಖೆ (**ಡಿಇಎ**) ಕಾರ್ಯಕ್ರಮದ ಅಡಿಯಲ್ಲಿ ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್ (**ಎಡಿಬಿ**)ನಿಂದ ತಾಂತ್ರಿಕ ನೆರವನ್ನು ಪಡೆದುಕೊಂಡು ಪಿಪಿಪಿ ವಿಭಾಗವನ್ನು ಸ್ಥಾಪಿಸಲಾಗಿದೆ. ಈ ವಿಭಾಗವು, **ಎಡಿಬಿ**ಯ **ಪಿಪಿಪಿ** (ತಜ್ಞರು) ಮತ್ತು **ಎಂಐಎಸ್** (ತಜ್ಞರು), ಒಬ್ಬರು ಅಧೀನ ಕಾರ್ಯದರ್ಶಿ ಮತ್ತು ಇಬ್ಬರು ಸಹಾಯಕ ನಿರ್ದೇಶಕರನ್ನೊಳಗೊಂಡಿದ್ದು ಇದಕ್ಕೆ ಪಿಪಿಪಿ ಕೋಶದ ನಿರ್ದೇಶಕರು ಮುಖ್ಯಸ್ಥರಾಗಿರುತ್ತಾರೆ.

ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಗೆ ಈ ಕೆಳಕಂಡ ಅಭಿವೃದ್ಧಿ ಸಂಸ್ಥೆಗಳು ಪೂರಕವಾಗಿ ಕಾರ್ಯನಿರ್ವಹಿಸುತ್ತಿವೆ:

(ಎ) ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮವು (ಕೆಎಸ್‌ಐಐಡಿಸಿ) ಃಖಂಐ ಮತ್ತು GAIL ವಿಷಯಗಳಿಗೆ ನೋಡಲ್ ಏಜನ್ಸಿಯಗಿರುತ್ತದೆ.

(ಬಿ) ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ನಿಯಮಿತ, ಕೆ-ರೈಡ್

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ಮತ್ತು ಸಂಬಂಧಪಟ್ಟ ಸಂಸ್ಥೆಗಳು ಆರಂಭಿಸಿದ/ ಉದ್ದೇಶಿಸಿದ **ಪಿಪಿಪಿ** ಅಡಿಯಲ್ಲಿನ ಯೋಜನೆಗಳನ್ನು ರೂಪಿಸುವುದಕ್ಕಾಗಿ ಹಾಗೂ ಕಾರ್ಯಗತಗೊಳಿಸುವುದಕ್ಕಾಗಿ ಉಪಯುಕ್ತ ಸಲಹಾ ಸೇವೆಗಳನ್ನು ಈ ಇಲಾಖೆಯು ಒದಗಿಸುತ್ತದೆ.

2018-19 ನೇ ಸಾಲಿಗೆ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ಆಯವ್ಯಯ ಹಾಗೂ ಮರು ಹೊಂದಾಣಿಕಯಡಿಯಲ್ಲಿ ರೂ. 60014.00 ಲಕ್ಷಗಳನ್ನು ಒದಗಿಸಲಾಗಿದ್ದು, ರೂ. 57265.79 ಲಕ್ಷಗಳು ವೆಚ್ಚವಾಗಿರುತ್ತದೆ. ಕಳೆದ ಮೂರು ವರ್ಷಗಳಲ್ಲಿ ಇಲಾಖೆಯ ಕಾರ್ಯಧಾರಿತ ಆಯವ್ಯಯ (Budget performance) ಈ ಕಳೆಕಂಡಂತೆ ಇರುತ್ತದೆ.

| ಆರ್ಥಿಕ ವರ್ಷ | ಅನುದಾನ (ರೂ. ಕೋಟಿಗಳಲ್ಲಿ) | ವೆಚ್ಚ (ರೂ. ಕೋಟಿಗಳಲ್ಲಿ) | ಶೇಕಡಾವಾರು ವೆಚ್ಚ |
|---|---|---|---|
| 2016-17 | 809.68 | 807.45 | 99.72 |
| 2017-18 | 789.99 | 778.92 | 98.60 |
| 2018-19 | 600.14 | 572.66 | 99.87 |

1. **ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನೆ (ಬಿಐಎಪಿ)**

ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣವು, ಪಿಪಿಪಿ ಮಾದರಿಯಲ್ಲಿ ನಿರ್ಮಿಸಲಾದ ರಾಷ್ಟ್ರದ ಪ್ರಪ್ರಥಮ ಗ್ರೀನ್‌ಫೀಲ್ಡ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣವಾಗಿದ್ದು, ಬಿಐಎಎಲ್ ಕಂಪನಿಯು ಈ ವಿಮಾನ ನಿಲ್ದಾಣವನ್ನು ಅಭಿವೃದ್ಧಿಪಡಿಸಿದ್ದು, 2008ರ ಮೇ ತಿಂಗಳನಲ್ಲಿ ತನ್ನ ಕಾರ್ಯಾಚರಣೆಯನ್ನು ಪ್ರಾರಂಭಿಸಿರುತ್ತದೆ.

ಈ ಕಂಪನಿಯಲ್ಲಿ ಕರ್ನಾಟಕ ಸರ್ಕಾರ ಮತ್ತು ಭಾರತ ಸರ್ಕಾರಗಳು ಜಂಟಿಯಾಗಿ ಶೇ.26ರಷ್ಟು ಷೇರುಗಳನ್ನು ಹೊಂದಿದ್ದು, ಉಳಿದ ಶೇ.74ರಷ್ಟು ಷೇರುಗಳನ್ನು ಖಾಸಗಿ ಪ್ರವರ್ತಕರು ಹೊಂದಿರುತ್ತಾರೆ.

ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣವು ದೇಶದಲ್ಲಿರುವ ದೊಡ್ಡ ವಿಮಾನ ನಿಲ್ದಾಣಗಳಲ್ಲಿ ಮೂರನೆಯ ಸ್ಥಾನಮಾನ ಪಡೆದಿದ್ದು, 2018-19ನೇ ಸಾಲಿನಲ್ಲಿ 22.88 ಮಿಲಿಯನ್ ಪ್ರಯಾಣಿಕರ ಸಂಚಾರವನ್ನು ಮುಟ್ಟಿರುತ್ತದೆ.

ಪ್ರಸ್ತುತ ಎರಡನೇ ರನ್-ವೇ ಸಿವಿಲ್ ಕಾಮಗಾರಿಯು ಪ್ರಗತಿಯಲ್ಲಿದ್ದು, ಎರಡನೇ ಟರ್ಮಿನಲ್‌ನ ಕಟ್ಟಡ ವಿನ್ಯಾಸವನ್ನು ತಯಾರಿಸಲಾಗುತ್ತಿದೆ.

**2. ಸಣ್ಣ ವಿಮಾನ ನಿಲ್ದಾಣಗಳು.**

2.1 **ಕಲಬುರಗಿ ವಿಮಾನ ನಿಲ್ದಾಣ:**

ಕಲಬುರಗಿ ವಿಮಾನ ನಿಲ್ದಾಣದ ಬಾಕಿ ಉಳಿದಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ರಾಜ್ಯ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ದಿನಾಂಕ:25.06.2015 ರಂದು ವಹಿಸಲಾಗಿದ್ದು, ಇದರಲ್ಲಿ 3 ಪ್ಯಾಕೇಜ್‌ಗಳಿಗೆ ರೂ. 109.48 ಕೋಟಿಗಳಷ್ಟು ವೆಚ್ಚವಾಗಲಿದ್ದು ರೂ.175.57 ಕೋಟಿಗಳ ಅಂದಾಜು ವೆಚ್ಚಕ್ಕೆ 2018-19ನೇ ಸಾಲಿನಲ್ಲಿ ಅನುಮೋದನೆಯಾಗಿರುತ್ತದೆ. ಈ ಯೋಜನೆಯು 2019ನೇ ಸಾಲಿನ ಕೊನೆಯಲ್ಲಿ ಪೂರ್ಣಗೊಳ್ಳುವ ಸಾಧ್ಯತೆ ಇದೆ. ಸದರಿ ವಿಮಾನ ನಿಲ್ದಾಣವನ್ನು ಆರ್.ಸಿ.ಎಸ್. ಯೋಜನೆಯಡಿ ಸೇರಿಸಲಾಗಿದ್ದು, ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಭಾರತೀಯ ವಿಮಾನಯಾನ ಪ್ರಾಧಿಕಾರಕ್ಕೆ ವಹಿಸಲಾಗಿದೆ.

**2.2 ವಿಜಯಪುರ ವಿಮಾನ ನಿಲ್ದಾಣ:**

ವಿಮಾನ ನಿಲ್ದಾಣಕ್ಕೆ ಗುರುತಿಸಲಾದ ಸ್ಥಳವನ್ನು ಸಮತಟ್ಟುಗೊಳಿಸುವುದಕ್ಕೆ ರೂ.100 ಕೋಟಿಗಳ ಎಂದು ಅವಶ್ಯಕತೆ ಇದೆ ಎಂದು ಎಎಐ ಇವರಿಂದ ವರದಿ ಪಡೆದ ನಂತರ ಖಾಸಗಿ ಅಭಿವೃದ್ಧಿದಾರರೊಂದಿಗೆ ಮಾಡಿಕೊಂಡ ಒಪ್ಪಂದವನ್ನು ಮುಕ್ತಾಯಗೊಳಿಸಲಾಗಿದೆ. ಪ್ರಸ್ತುತ ಮತ್ತೊಮ್ಮೆ OLS ಅಧ್ಯಯನ ಮತ್ತು ಭೂಮಿಯನ್ನು ಸಮತಟ್ಟುಗೊಳಿಸುವುದಕ್ಕೆ ತಗಲುವ ವೆಚ್ಚವನ್ನು ಅಂದಾಜಿಸಲು ಕ್ರಮಕೈಗೊಳ್ಳಲಾಗುತ್ತಿದೆ.

**<u>2.3 ಹಾಸನ ವಿಮಾನ ನಿಲ್ದಾಣ:</u>**

ಹಾಸನ ವಿಮಾನ ನಿಲ್ದಾಣವನ್ನು ರಾಜ್ಯ ಸರ್ಕಾರದ ವತಿಯಿಂದ ಅನುಷ್ಠಾನಗೊಳಸಲು ನಿರ್ಧರಿಸಲಾಗಿದ್ದು, ಈ ಸಂಬಂಧ Transaction Advisory/Technical Consultancy ಸೇವೆಯನ್ನು ಹೊಸದಾಗಿ ನಿರ್ಮಿಸಲಾದ ಕಲಬುರಗಿ ವಿಮಾನ ನಿಲ್ದಾಣಕ್ಕೆ ಮೆ: RITES ರವರ ಸೇವೆಯನ್ನು ಪಡೆಯಲಾಗಿರುವ ಮಾದರಿಯಲ್ಲಿ ಹಾಸನ ವಿಮಾನ ನಿಲ್ದಾಣಕ್ಕೂ ಸಹ ಮೆ: ರೈಟ್ಸ್ ಸಂಸ್ಥೆಯ ಸೇವೆಯನ್ನು ಪಡೆಯಲಾಗುತ್ತಿದೆ.

**<u>2.4 ಬಳ್ಳಾರಿ ವಿಮಾನ ನಿಲ್ದಾಣ:</u>**

ಬಳ್ಳಾರಿ ವಿಮಾನ ನಿಲ್ದಾಣವನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದ್ದು, ಮೆ:ಮಾರ್ಗ್ ಶ್ರೀ ಕೃಷ್ಣದೇವರಾಯ ಏರ್‌ಪೋರ್ಟ್ ಪ್ರೈ.ಅಿ., ಇವರನ್ನು ಅಭಿವೃದ್ಧಿದಾರರನ್ನಾಗಿ ಆಯ್ಕೆ ಮಾಡಲಾಗಿರುತ್ತದೆ. ವಿಮಾನ ನಿಲ್ದಾಣ ಅಭಿವೃದ್ಧಿಪಡಿಸಲು ಅಗತ್ಯವಿರುವ 900 ಎಕರೆ ಜಮೀನಿನ ಪೈಕಿ, 823 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದ್ದು, ಬಾಕಿ ಜಮೀನಿನ ಭೂಸ್ವಾಧೀನ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ. ಯೋಜನಾ ಅಭಿವೃದ್ಧಿ ಒಪ್ಪಂದ ಮತ್ತು ಭೂಕರಾರು ಒಪ್ಪಂದವನ್ನು ಅಂತಿಮಗೊಳಸಲಾಗುತ್ತಿದೆ. ಅಭಿವೃದ್ಧಿದಾರರನ್ನು ಭೂಸ್ವಾದೀನ ಪಡಿಸಿಕೊಂಡಿರುವ 823 ಎಕರೆ ಜಮೀನನ್ನು ತಮ್ಮ ಸುಪರ್ಧಿಗೆ ತೆಗೆದುಕೊಂಡು ನಿರ್ಮಾಣ ಕಾಮಗಾರಿಗಳನ್ನು ಪ್ರಾರಂಭಿಸುವಂತೆ ಕೋರಲಾಗಿದೆ.

<u>2.5 ಶಿವಮೊಗ್ಗ ವಿಮಾನ ನಿಲ್ದಾಣ:</u>

ಶಿವಮೊಗ್ಗ ಜಿಲ್ಲೆಯಲ್ಲಿ ವಿಮಾನ ನಿಲ್ದಾಣವನ್ನು ಅಭಿವೃಧ್ಧಿಪಡಿಸಲು ಯಾವುದೇ ಪ್ರತಿಕ್ರಿಯೆಬಾರದೆ ಇದ್ದುದರಿಂದ ನೋ ಫ್ರೀಲ್ ವಿಮಾನ ನಿಲ್ದಾಣವನ್ನು ಪಿಪಿಪಿ ಮಾದರಿಯಲ್ಲಿ ಅನುಷ್ಠಾನಗೊಳಸಲು ಉದ್ದೇಶಿಸಲಾಗಿದೆ, ಈ ಹಿನ್ನೆಲೆಯಲ್ಲಿ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್‌ನ್ನು ದಿನಾಂಕ:28.02.2019ರಂದು ಆಹ್ವಾನಿಸಲಾಗಿರುತ್ತದೆ. ಟೆಂಡರ್ ಮೌಲ್ಯಮಾಪನ ಸಮಿತಿ/ಟೆಂಡರ್ ಸ್ಕೃಟಿನಿ ಸಮಿತಿಯ ರಚನೆಗಾಗಿ ಇತ್ತೀಚೆಗೆ ಪ್ರಸ್ತಾವನೆ ಸ್ವೀಕೃತವಾಗಿದ್ದು, ಪರಿಶೀಲನೆಯಲ್ಲಿರುತ್ತದೆ.

**<u>3. ಭಾರತೀಯ ವಿಮಾನ ನಿಲ್ದಾಣಗಳ ಒಡೆತನಕ್ಕೆ ಸೇರಿದ ವಿಮಾನ ನಿಲ್ದಾಣಗಳು.</u>**

**<u>3.1 ಮೈಸೂರು ವಿಮಾನ ನಿಲ್ದಾಣ:</u>**

ಮೈಸೂರು ವಿಮಾನ ನಿಲ್ದಾಣದ ಮೊದಲ ಹಂತದ ಅಭಿವೃಧ್ಧಿಗಾಗಿ ಅವಶ್ಯವಿದ್ದ 175 ಎಕರೆ ಜಮೀನಿನ ಭೂಸ್ವಾಧೀನ ವೆಚ್ಚವನ್ನು ರಾಜ್ಯ ಸರ್ಕಾರವು ಭರಿಸಿ, ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರಕ್ಕೆ ಜಮೀನನ್ನು ಹಸ್ತಾಂತರಿಸಲಾಗಿರುತ್ತದೆ. ಸದರಿ ವಿಮಾನ ನಿಲ್ದಾಣವು ದಿನಾಂಕ:01-10-2010ರಿಂದ ಕಾರ್ಯಾರಂಭ ಗೊಂಡಿರುತ್ತದೆ. ಈ ವಿಮಾನ ನಿಲ್ದಾದಲ್ಲಿ ಎ.320 ವಿಮಾನವನ್ನು ಕಾರ್ಯಾಚರಣೆಗೊಳಸಲು ರನವೇಯನ್ನು ವಿಸ್ತರಿಸಲು ರಾಷ್ಟ್ರೀಯ ಹೆದ್ದಾರಿ-212ರ ಹತ್ತಿರ ಅಂಡರ್ ಪಾಸ್ ನಿರ್ಮಾಣಕ್ಕಾಗಿ ನಾಗರೀಕ ವಿಮಾನಯಾನ ಮಂತ್ರಾಲಯವು ಅನುಮತಿಯನ್ನು ನೀಡಿರುತ್ತದೆ. ಆದ್ದರಿಂದ ಭಾತೀಯ ವಿಮಾನ ನಿಲ್ದಾಣ ಪ್ರಾಧಿಕಾರ ಇವರ ಪ್ರಸ್ತಾವನೆಯಂತೆ, ರನ್-ವೇ ವಿಸ್ತರಣೆಗಾಗಿ ಹೆಚ್ಚುವರಿ 280 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವಂತೆ ಕೆಐಎಡಿಬಿ ಇವರಿಗೆ ತಿಳಸಲಾಗಿದೆ.

**<u>3.2 ಹುಬ್ಬಳ್ಳಿ ವಿಮಾನ ನಿಲ್ದಾಣ:</u>**

ಈ ವಿಮಾನ ನಿಲ್ದಾಣವು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಸೇರಿರುತ್ತದೆ ಹಾಗೂ ಈ ವಿಮಾನ ನಿಲ್ದಾಣದಲ್ಲಿ ಎ-320 ವಿಮಾನವನ್ನು ಕಾರ್ಯಗತಗೊಳಸಲು ಈ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸಲಾಗಿದೆ. ರಾಜ್ಯ ಸರ್ಕಾರವು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದೊಂದಿಗೆ ದಿನಾಂಕ:23.01.2013ರಂದು ಮಾಡಿಕೊಂಡಿರುವ ಒಡಂಬಡಿಕೆ ಅನುಸಾರ ಹುಬ್ಬಳ್ಳಿ ವಿಮಾನ ನಿಲ್ದಾಣವನ್ನು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದಿಂದ ಉನ್ನತೀಕರಿಸಲಾಗುತ್ತಿದೆ. 588 ಎಕರೆ ಜಮೀನನ್ನು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರಕ್ಕೆ ಹಸ್ತಾಂತರಿಸಲಾಗಿದ್ದು, ಈ ವಿಮಾನ

ನಿಲ್ದಾಣವನ್ನು ಮೇಲ್ದರ್ಜೆಗೇರಿಸುವ ಕಾಮಗಾರಿಯು ಮುಕ್ತಾಯಗೊಂಡು, ದಿನಾಂಕ:12.12.2017ರಿಂದ ಸಂಚಾರಕ್ಕೆ ಮುಕ್ತಗೊಳಸಲಾಗಿದೆ.

**3.3 ಬೆಳಗಾವಿ ವಿಮಾನ ನಿಲ್ದಾಣ:**

ಈ ವಿಮಾನ ನಿಲ್ದಾಣವು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರಕ್ಕೆ ಸೇರಿರುತ್ತದೆ. ಹಾಗೂ ಈ ವಿಮಾನ ನಿಲ್ದಾಣದಲ್ಲಿ ಎ-320 ವಿಮಾನವನ್ನು ಕಾರ್ಯಗತಗೊಳಸಲು ಈ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸಲಾಗಿದ್ದು, ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದೊಂದಿಗೆ ದಿನಾಂಕ:19.1.2012ರಂದು ಮಾಡಿಕೊಂಡಿರುವ ಒಡಂಬಡಿಕೆ ಪ್ರಕಾರ ರಾಜ್ಯ ಸರ್ಕಾರವು 370 ಎಕರೆ ಜಮೀನನ್ನು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರಕ್ಕೆ ಹಸ್ತಾಂತರಿಸಲಾಗಿದೆ. ಮೇಲ್ದರ್ಜೆಗೇರಿಸುವ ಕಾಮಗಾರಿಗಳು ಮುಕ್ತಾಯಗೊಂಡಿದ್ದು, ದಿನಾಂಕ:14.09.2017ರಲ್ಲಿ ವಿಮಾನ ನಿಲ್ದಾಣವನ್ನು ಸಂಚಾರಕ್ಕೆ ಮುಕ್ತಾಯಗೊಳಸಲಾಗಿದೆ.

**3.4 ಮಂಗಳೂರು ವಿಮಾನ ನಿಲ್ದಾಣ:**

ಮಂಗಳೂರು ವಿಮಾನ ನಿಲ್ದಾಣವು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದ ಒಡೆತನದಲ್ಲಿದ್ದು, ರಾಜ್ಯ ಸರ್ಕಾರ ಒಪ್ಪಿಕೊಂಡಿರುವಂತೆ, ಭೂಸ್ವಾಧೀನದ ವೆಚ್ಚ, 2ನೇ ರನ್‌ವೇ, ಹೊಸ ಟರ್ಮಿನಲ್ ಕಟ್ಟಡ ನಿರ್ಮಾಣ ಮತ್ತು ಪುನರ್ವಸತಿ ಕಾರ್ಯದ ವೆಚ್ಚವನ್ನು ಭರಿಸಬೇಕಾಗುತ್ತದೆ. ಮುಂದುವರೆದು ಮಂಗಳೂರು ವಿಮಾನ ನಿಲ್ದಾಣದ ರನ್-ವೇಯನ್ನು ಮತ್ತಷ್ಟು ವಿಸ್ತರಿಸುವ ಪ್ರಸ್ತಾವನೆಯು ಸರ್ಕಾರದ ಪರಿಗಣನೆಯಲ್ಲಿರುತ್ತದೆ.

**3.5 ಬೀದರ್ ವಿಮಾನ ನಿಲ್ದಾಣ:**

ಬೀದರ್ ವಿಮಾನ ನಿಲ್ದಾಣದ ಕಾರ್ಯಾಚರಣೆಗಾಗಿ ಕರ್ನಾಟಕ ಸರ್ಕಾರದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಲು ಭಾರತೀಯ ವಿಮಾನಯಾನ ಮಂತ್ರಾಲಯ ಇವರು ಜಿಹೆಚ್‌ಎಐಎಲ್‌ಗೆ ನಿರ್ದೇಶನ ನೀಡಲಾಗಿದೆ. ಸದರಿ ವಿಮಾನ ನಿಲ್ದಾಣವನ್ನು 2019-20ರ ಅವಧಿಯಲ್ಲಿ ಕಾರ್ಯಾಚರಣೆಗೊಳಸಲು ಕ್ರಮ ಕೈಗೊಳ್ಳಲಾಗುತ್ತಿದೆ.

**4. ದೇವನಹಳ್ಳಿ ಬ್ಯುಸಿನೆಸ್ ಪಾರ್ಕ್**

ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶದ ಪಕ್ಕದಲ್ಲಿನ ಸುಮಾರು 408 ಎಕರೆ ಭೂಮಿಯಲ್ಲಿ ಬೆಂಗಳೂರು ಸಿಗ್ನೇಚರ್ ಬ್ಯುಸಿನೆಸ್ ಪಾರ್ಕ್‌ನ್ನು ಅಭಿವೃದ್ಧಿಪಡಿಸಲಾಗುತ್ತಿದೆ. Consortium of Stantac Consulting Pvt. Ltd., Ahmedabad and Hones Lang Lasalle Property Consultants (India) Pvt. Ltd., Ahmedabad ಇವರನ್ನು ಈ ಯೋಜನೆಗೆ ಮಾಸ್ಟರ್ ಪ್ಲ್ಯಾನ್ ತಯಾರಿಸಲು ಸಮಾಲೋಚಕರನ್ನಾಗಿ ನೇಮಿಸಲಾಗಿದೆ.

**5. ಬೆಂಗಳೂರು ಅಂತರಾಷ್ಟ್ರೀಯ ಸಮ್ಮೇಳನ ಕೇಂದ್ರ ಸಂಕೀರ್ಣದ ಯೋಜನೆ (ಬಿಐಸಿ-3)**

ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಪಕ್ಕದಲ್ಲಿರುವ 408 ಎಕರೆ ಜಮೀನಿನಲ್ಲಿ 35 ಎಕರೆ ಭೂಮಿಯಲ್ಲಿ ಕನಿಷ್ಟ 6000 ಆಸನಗಳ ವ್ಯವಸ್ಥೆ ಇರುವ ಅಂತರಾಷ್ಟ್ರೀಯ ಸಮ್ಮೇಳನ ಕೇಂದ್ರ ಸಂಕೀರ್ಣ (International Convention Centre) ಪ್ರದರ್ಶನ ಸಭಾಂಗಣ, ಫುಡ್ ಕೋರ್ಟ್ ಮತ್ತಿತರ ಸಂಬಂಧಪಟ್ಟ ಸೌಲಭ್ಯಗಳನ್ನು ಈ ಕೆಳಕಂಡ ಅಂಶಗಳನ್ನು ಒಳಗೊಂಡಂತೆ ಅಭಿವೃದ್ಧಿಪಡಿಸಲಾಗುತ್ತಿದೆ:

1) ಇಪಿಸಿ ಮಾದರಿಯಲ್ಲಿ ಮುಖ್ಯ ಸಮ್ಮೇಳನ ಸಭಾಂಗಣ, ಪ್ರದರ್ಶನ ಸಭಾಂಗಣ ಮತ್ತು ಫುಡ್ ಕೋರ್ಟ್‌ಅನ್ನು ಒಳಗೊಂಡಿರುವ ಐಸಿಸಿಯ ಪ್ರಧಾನ ಘಟಕಗಳು.

2) ಐಸಿಸಿಯ ಕಾರ್ಯನಿರ್ವಹಣಾ ಮತ್ತು ವ್ಯವಸ್ಥಾಪನಾ ಘಟಕದ ರಚನೆ ಹಾಗೂ ಪಿಪಿಪಿ ಮಾದರಿಯಲ್ಲಿ ಅದಕ್ಕೆ ಸಂಬಂಧಪಟ್ಟ/ ಪೂರಕ ಸೌಲಭ್ಯಗಳಾದ 5/4/3 ಸ್ಟಾರ್ ಪ್ರವರ್ಗದ ಹೋಟೆಲ್‌ಗಳು, ಸರ್ವೀಸ್ ಅಪಾರ್ಟ್‌ಮೆಂಟ್‌ಗಳು, ಥೀಮ್ ಪಾರ್ಕ್(ಗಳು) ಮುಂತಾದ ಇತರ ಅಗತ್ಯ ಮೂಲಸೌಲಭ್ಯವನ್ನು ಪಿಪಿಪಿ ಆಧಾರದ ಮೇಲೆ ಸ್ಥಾಪಿನೆ ಮತ್ತು ಅದಕ್ಕಾಗಿ ಖಾಸಗಿ ವಲಯದ ಸಹಭಾಗಿತ್ವವನ್ನು ಆಹ್ವಾನಿಸುವಿಕೆ.
3) ಕೆಎಸ್‌ಐಐಡಿಸಿ ಸಂಸ್ಥೆಯನ್ನು ಈ ಯೋಜನೆಯನ್ನು ಅಭಿವೃದ್ಧಿಪಡಿಸಲು ಎಲ್ಲಾ ಕ್ರಮಕೈಗೊಳ್ಳಲು ನೋಡಲ್ ಸಂಸ್ಥೆಯನ್ನಾಗಿ ನೇಮಿಸಿ ಅಂತರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ಪಡೆದಿರುವ Design consultants / concept Architecture / Design ಮತ್ತು PMC ಸೇವೆಗಳನ್ನು ಒದಗಿಸುವ ಸಲುವಾಗಿ ನೇಮಿಸಿಕೊಳ್ಳಲು ಸರ್ಕಾರದ ಅನುಮೋದನೆ ನೀಡಲಾಗಿದೆ. ಅದರಂತೆ, ಮೆ:Populous Design Pvt Ltd. ಇವರನ್ನು Concept Design ಮತ್ತು Architecture /Design ಸೇವೆಗಳನ್ನು ಒದಗಿಸಲು ಆಯ್ಕೆ ಮಾಡಲಾಗಿದೆ.
4) Green House concept ಮತ್ತು Garden City Theme ಗೆ ಸಂಬಂಧಿಸಿದಂತೆ ಸಚಿವ ಸಂಪುಟದ ಅನುಮೋದನೆ ದೊರೆತ್ತಿದ್ದು, ಬಿಡ್ಡರ್‌ಗಳ ಸಲಹೆ ಮತ್ತು ವಿಮರ್ಶೆಗಳನ್ನು ದಿನಾಂಕ:20.02.2017ರಂದು ದುಂಡು ಮೇಜು ಸಮ್ಮೇಳನದಲ್ಲಿ ಪಡೆಯಲಾಗಿದ್ದು ಇದನ್ನು ಅನುಷ್ಠಾನಗೊಳಸಲು ಪರ್ಯಾಯ ಮಾರ್ಗಗಳು ರಾಜ್ಯ ಸರ್ಕಾರದ ಪರಿಗಣನೆಯಲ್ಲಿದೆ.
5) ಅಂತರಾಷ್ಟ್ರೀಯ ವಾಣಿಜ್ಯ ಸಂಕೀರ್ಣ ಮತ್ತು ಎಕ್ಸಿಬಿಷನ್ ಹಾಲ್ (ಹೋಟೆಲ್ ಮೊತ್ತವನ್ನು ಹೊರತುಪಡಸಿ)ನ್ನು ಅಭಿವೃದ್ಧಿಪಡಿಸಲು ಸರ್ಕಾರಿ ಆದೇಶ ಸಂ:ಐಡಿಡಿ 44 ಡಿಐಎ 2011 ದಿನಾಂಕ:04.12.2017ರಲ್ಲಿ ಶೇಕಡ 100 ರಷ್ಟು ವಿಜಿಎಫ್‌ನ್ನು ರಾಜ್ಯ ಸರ್ಕಾರವು ಒದಗಿಸಲು ಅನುಮೋದನೆ ನೀಡಲಾಗಿರುತ್ತದೆ.

## 6. <u>ರೈಲ್ವೆ ಯೋಜನೆಗಳು</u>

### 6.1 <u>ಮುನಿರಾಬಾದ್-ಮೆಹಬೂನಗರ (ಗಿಣಗೆರಾ – ರಾಯಚೂರು) ಹೊಸ ರೈಲ್ವೆ ಮಾರ್ಗ ಯೋಜನೆ:</u>

ರಾಜ್ಯ ಸರ್ಕಾರವು ಮುನಿರಾಬಾದ್-ಮೆಹಬೂಬನಗರ ರೈಲ್ವೆ ಮಾರ್ಗ ಯೋಜನೆಯನ್ನು ಪರಿಷ್ಕೃತ ಅಂದಾಜು ವೆಚ್ಚ ರೂ.1350.91 ಕೋಟಿಗಳಲ್ಲಿ ಶೇ.50.50 ವೆಚ್ಚ ಹಂಚಿಕೆಯಡಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ರಾಜ್ಯ ಸರ್ಕಾರದ ಪಾಲಿನ ಮೊತ್ತ ರೂ.675.45 ಕೋಟಿಗಳಲ್ಲಿ ಈವರೆವಿಗೂ ರೂ.515.2473 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಹಾಗೂ ರೈಲ್ವೆ ಇಲಾಖೆಗೆ 1254 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿ ಹಸ್ತಾಂತರಿಸಲಾಗಿದೆ. ರೈಲ್ವೆ ಇಲಾಖೆಯು ಗಂಗಾವತಿ-ಕರಟಗಿ ವಿಭಾಗದಲ್ಲಿನ ವ್ಯಾಪ್ತಿಯ ಕಾಮಗಾರಿಯನ್ನು ಪೂರ್ಣಗೊಳಸಿ, 2019ರಲ್ಲಿ ಮುಕ್ತಗೊಳಸುವ ಗುರಿಯನ್ನು ಹೊಂದಿದ್ದು, ಇದಕ್ಕಾಗಿ ಕೊಪ್ಪಳ ಜಿಲ್ಲೆಯಲ್ಲಿ ಅಗತ್ಯವಿರುವ ಜಮೀನನ್ನು ನೇರ ಖರೀದಿ ಮೂಲಕ ಭೂಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

### 6.2 <u>ತುಮಕೂರು-ದಾವಣಗೆರೆ ರೈಲು ಮಾರ್ಗ ಯೋಜನೆ:</u>

ರಾಜ್ಯ ಸರ್ಕಾರವು ತುಮಕೂರು-ದಾವಣಗೆರೆ ರೈಲು ಮಾರ್ಗ ಯೋಜನೆಯನ್ನು ರೈಲ್ವೆ ಇಲಾಖೆಯೊಂದಿಗೆ ಶೇಕಡ 50:50 ವೆಚ್ಚ ಹಂಚಿಕೆಯಡಿ ರೂ.1801.00 ಅಂದಾಜು ವೆಚ್ಚದಲ್ಲಿ ಹಾಗೂ ಅಗತ್ಯವಿರುವ ಜಮೀನನ್ನು ಉಚಿತವಾಗಿ ರೈಲ್ವೆ ಇಲಾಖೆಗೆ ನೀಡುವುದರೊಂದಿಗೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಪ್ರಸ್ತುತ ನೈರುತ್ಯ ರೈಲ್ವೆ ಇಲಾಖೆಗೆ ನಿರ್ಮಾಣಕ್ಕಾಗಿ ರೂ.50 ಕೋಟಿಗಳನ್ನು ಹಾಗೂ ಭೂಸ್ವಾಧೀನ ವೆಚ್ಚಕ್ಕಾಗಿ ರೂ.70.98 ಕೋಟಿಗಳನ್ನು ಜಿಲ್ಲಾಧಿಕಾರಿ ರವರಿಗೆ

ಬಿಡುಗಡೆಗೊಳಸಲಾಗಿದೆ. 136 ಎಕರೆ ಜಮೀನನ್ನು ರೈಲ್ವೆ ಇಲಾಖೆಗೆ ಹಸ್ತಾಂತರಿಸಲಾಗಿದೆ. ರೈಲ್ವೆ ಇಲಾಖೆಯು ಉರಿಕೆರೆ – ತಿಮ್ಮರಾಜನಹಳ್ಳ 12.ಕಿ.ಮೀ ಮಾರ್ಗದ ಕಾಮಗಾರಿಯನ್ನು ಪ್ರಾರಂಭಿಸಿರುತ್ತದೆ.

**6.3 <u>ತುಮಕೂರು-ರಾಯದುರ್ಗ ರೈಲು ಮಾರ್ಗ ಯೋಜನೆ:</u>**

ರಾಜ್ಯ ಸರ್ಕಾರವು ತುಮಕೂರು-ರಾಯದುರ್ಗ ರೈಲು ಮಾರ್ಗ ಯೋಜನೆಯನ್ನು ರೈಲ್ವೆ ಇಲಾಖೆಯೊಂದಿಗೆ ಶೇಕಡ 50:50 ವೆಚ್ಚ ಹಂಚಿಕೆಯಡಿ ರೂ.479.59 ಕೋಟಿಗಳ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ರಾಜ್ಯದ ಪಾಲಿನ ಮೊತ್ತ ರೂ.239.79 ಕೋಟಿಗಳಲ್ಲಿ ಈವರೆವಿಗೂ ರೂ.170.00 ಕೋಟಿಯನ್ನು ಬಿಡುಗಡೆಗೊಳಸಲಾಗಿದೆ ಹಾಗೂ 270 ಎಕರೆ ಜಮೀನನ್ನು ರೈಲ್ವೆ ಇಲಾಖೆಗೆ ಹಸ್ತಾಂತರಿಸಲಾಗಿದ್ದು, ಉಳದ ಅಗತ್ಯವಿರುವ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

**6.4 <u>ಬಾಗಲಕೋಟೆ – ಕುಡಚಿ ಹೊಸ ರೈಲ್ವೆ ಮಾರ್ಗ ಯೋಜನೆ:</u>**

ರಾಜ್ಯ ಸರ್ಕಾರವು ಬಾಗಲಕೋಟೆ – ಕುಡಚಿ ರೈಲು ಮಾರ್ಗ ಯೋಜನೆಯನ್ನು ರೈಲ್ವೆ ಇಲಾಖೆಯೊಂದಿಗೆ ಶೇಕಡ 50:50 ವೆಚ್ಚ ಹಂಚಿಕೆಯಡಿ ರೂ.816.14 ಕೋಟಿಗಳ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ರಾಜ್ಯದ ಪಾಲಿನ ಮೊತ್ತ ರೂ.408.07 ಕೋಟಿಗಳಲ್ಲಿ ಈವರೆವಿಗೂ ರೂ.148.84 ಕೋಟಿಯನ್ನು ನಿರ್ಮಾಣ ಕಾಮಗಾರಿಗೆ ರೈಲ್ವೆ ಇಲಾಖೆಗೆ ಬಿಡುಗಡೆಗೊಳಸಲಾಗಿದೆ ಹಾಗೂ ರೂ.239.67 ಕೋಟಿಗಳನ್ನು ಭೂಸ್ವಾಧೀನ ವೆಚ್ಚಕ್ಕಾಗಿ ಬಿಡುಗಡೆಗೊಳಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ. ಬಾಗಲಕೋಟೆ –ಖಜ್ಜಿದೋಣಿ ವಿಭಾಗದ 30 ಕಿ.ಮೀ ಮಾರ್ಗದ ಕಾಮಗಾರಿ ಪೂರ್ಣಗೊಂಡಿರುತ್ತದೆ.

**6.5 <u>ಚಿಕ್ಕಮಗಳೂರು-ಸಕಲೇಶಪುರ ರೈಲ್ವೆ ಮಾರ್ಗ ಯೋಜನೆ:</u>**

ರಾಜ್ಯ ಸರ್ಕಾರವು ಚಿಕ್ಕಮಗಳೂರು-ಸಕಲೇಶಪುರ ರೈಲು ಮಾರ್ಗ ಯೋಜನೆಯನ್ನು ರೈಲ್ವೆ ಇಲಾಖೆಯೊಂದಿಗೆ ಶೇಕಡ 50:50 ವೆಚ್ಚ ಹಂಚಿಕೆಯಡಿ ಅಂದಾಜು ವೆಚ್ಚ ರೂ.657.80 ಕೋಟಿಗಳ ಕೈಗೆತ್ತಿಕೊಳ್ಳಲಾಗಿದ್ದು, ನಿರ್ಮಾಣ ಕಾಮಗಾರಿಗಾಗಿ ರೈಲ್ವೆ ಇಲಾಖೆ ರೂ. 25.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಈ ಯೋಜನೆಗೆ ಅಗತ್ಯವಿರುವ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ರೂ. 51.49 ಕೋಟಿಗಳನ್ನು ಜಿಲ್ಲಾಧಿಕಾರಿಗಳಗೆ ಬಿಡುಗಡೆ ಮಾಡಲಾಗಿದೆ. ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ.

**6.6 <u>ಗದಗ-ವಾಡಿ ರೈಲ್ವೆ ಮರ್ಗ ಯೋಜನೆ:</u>**

ರಾಜ್ಯ ಸರ್ಕಾರವು ಗದಗ-ವಾಡಿ ರೈಲ್ವೆ ಮಾರ್ಗ ಯೋಜನೆಯನ್ನು ರೈಲ್ವೆ ಮಂತ್ರಾಲಯವು ಶೇ. 50:50 ವೆಚ್ಚ ಹಂಚಿಕೆಯಡಿ ಈ ಮಾರ್ಗಕ್ಕೆ ಅಗತ್ಯವಿರುವ ಭೂಮಿಯನ್ನು ರಾಜ್ಯ ಸರ್ಕಾರವು ಉಚಿತವಾಗಿ, ನೀಡುವುದರೊಂದಿಗೆ ರೂ. 1922.14 ಕೋಟಿಗಳ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ರಾಜ್ಯ ಸರ್ಕಾರದ ಪಾಲಿನ ಮೊತ್ತದಲ್ಲಿ ರೂ. 70.28 ಕೋಟಿಗಳನ್ನು ನಿರ್ಮಾಣ ಕಾಮಗಾರಿಗಾಗಿ ರೈಲ್ವೆ ಇಲಾಖೆಗೆ ಬಿಡುಗಡೆಗೊಳಸಲಾಗಿದೆ. ಈ ರೈಲು ಮಾರ್ಗದ

ಯೋಜನೆಗೆ ಅಗತ್ಯವಿರುವ ಜಮೀನನ್ನು ಕೆ.ಐ.ಎ.ಡಿ.ಬಿ. ವತಿಯಿಂದ ಭೂಸ್ವಾಧೀನ ಪಡಿಸಿಕೊಳ್ಳಲಾಗುತ್ತಿದೆ. ಈವರೆವಿಗೂ 1379 ಎಕರೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಂಡು ರೈಲ್ವೆ ಇಲಾಖೆಗೆ ಹಸ್ತಾಂತರಿಸಲಾಗಿದೆ. ಅಗತ್ಯವಿರುವ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿದೆ ಭೂಸ್ವಾಧೀನ ವೆಚ್ಚಕ್ಕಾಗಿ ಈವರೆವಿಗೂ ರೂ.246.61 ಕೋಟಿಯನ್ನು ಕೆ.ಐ.ಎ.ಡಿ.ಬಿ.ಗೆ ಬಿಡುಗಡೆ ಮಾಡಲಾಗಿದೆ. ತಳಕಲ್-ಕುಷ್ಟಗಿ ವ್ಯಾಪ್ತಿಯ 57 ಕಿ.ಮೀ ಹಾಗೂ ಶಾಹಪುರ ವ್ಯಾಪ್ತಿಯ 47 ಕಿ.ಮೀ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.

### 6.7 <u>ಕೋಲಾರ ರೈಲು ಭೋಗಿ ಕಾರ್ಖಾನೆ:</u>

ಕೋಲಾರ ಜಿಲ್ಲೆಯಲ್ಲಿ ಶೇ 50:50 ವೆಚ್ಚ ಹಂಚಿಕೆ ಆಧಾರದ ಮೇಲೆ ಅಗತ್ಯವಿರುವ ಜಮೀನನ್ನು ರಾಜ್ಯ ಸರ್ಕಾರವು ಉಚಿತವಾಗಿ ಒದಗಿಸುವ ಷರತ್ತಿನೊಂದಿಗೆ ಕಾರ್ಖಾನೆಯನ್ನು ಸ್ಥಾಪಿಸಲು ರೈಲ್ವೆ ಮಂತ್ರಾಲಯದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿದೆ ಹಾಗೂ ಇದರ ಜೊತೆಗೆ 1118.8 ಎಕರೆ ಜಮೀನನ್ನು ಉಚಿತವಾಗಿ ನೀಡಲು ಸಹ ಒಪ್ಪಿಕೊಂಡಿರುತ್ತದೆ. ಈ ಬಗ್ಗೆ ರಾಜ್ಯ ಸರ್ಕಾರ ಮತ್ತು ರೈಲ್ವೆ ಇಲಾಖೆಯು ಈಗಾಗಲೇ ಮಾಡಿಕೊಳ್ಳಲಾಗಿದ ಒಡಂಬಡಿಕೆಯನ್ನು (MoU) ಸಹ ದಿನಾಂಕ:30.01.2019ರಿಂದ ಮುಂದಿನ 5 ವರ್ಷದವರೆಗೆ ಮುಂದುವರೆಸಲಾಗಿದೆ, ಭಾರತದಲ್ಲಿ ರೈಲ್ವೆ ಮಂಡಳಿಯು ರೈಲ್ ಕೋಚ್ ಕಾರ್ಖಾನೆಗಳ ಸಾಮರ್ಥ್ಯವನ್ನು ಪರಿಶೀಲಿಸುತ್ತಿದ್ದು, ಈ ಯೋಜನೆಯ ವರದಿಯು ರೈಲ್ವೆ ಇಲಾಖೆಯಲ್ಲಿ ಪರಿಶೀಲನೆಯಲ್ಲಿದೆ. ಪ್ರಸ್ತುತ ರೈಲ್ವೆ ಇಲಾಖೆ ಸಲ್ಲಿಸುವ ವರದಿಯನ್ನು ನಿರೀಕ್ಷಿಸಲಾಗಿದೆ.

### 6.8 <u>ಹುಬ್ಬಳ್ಳಿ – ಅಂಕೋಲಾ ಹೊಸ ರೈಲು ಮಾರ್ಗ ಯೋಜನೆ:</u>

ಅಸ್ತಿತ್ವದಲ್ಲಿರುವ ಕೊಂಕಣ ರೈಲ್ವೆ ಮಾರ್ಗಕ್ಕೆ ಹುಬ್ಬಳ್ಳಿಯನ್ನು ಸಂಪರ್ಕಿಸುವ ಸಲುವಾಗಿ 1997-98ನೇ ಸಾಲಿನಲ್ಲಿ ರೈಲ್ವೆ ಮಂತ್ರಾಲಯವು 168 ಕಿ.ಮೀ ಗಳ ಹುಬ್ಬಳ್ಳಿ-ಅಂಕೋಲಾ ರೈಲ್ವೆ ಮಾರ್ಗವನ್ನು ಅನುಮೋದಿಸಿರುತ್ತದೆ. ಸದರಿ ರೈಲ್ವೆ ಮಾರ್ಗವು ಉತ್ತರ ಕರ್ನಾಟಕದ ಒಳನಾಡು ಮತ್ತು ಕರ್ನಾಟಕದ ಪಶ್ಚಿಮ ಕರಾವಳಿಗೆ ಸಂಪರ್ಕ ಕಲ್ಪಿಸುತ್ತದೆ. ಹುಬ್ಬಳ್ಳಿಯಿಂದ ಕಲಘಟಗಿವರೆಗಿನ 40 ಕಿ.ಮೀ ಮಾರ್ಗದಲ್ಲಿನ ಪ್ರಾಥಮಿಕ ಕಾಮಗಾರಿಯನ್ನು ಪೂರ್ಣಗೊಳಿಸಲು ರೈಲ್ವೆ ಇಲಾಖೆಯು ರೂ.117,00 ಕೋಟಿ ಅನುದಾನ ಬಿಡುಗಡೆ ಮಾಡಿರುತ್ತದೆ. ಈ ರೈಲ್ವೆ ಮಾರ್ಗವು ಅರಣ್ಯ ಪ್ರದೇಶದಲ್ಲಿ ಹಾದುಹೋಗುವ ಕಾರಣ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸ್ಥಾಪಿಸಿರುವ ಕೇಂದ್ರ ಉನ್ನತಾಧಿಕಾರಿಗಳ ಸಮಿತಿಯ ಮುಂದೆ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಲಾಗಿರುತ್ತದೆ.

ಈ ಯೋಜನೆಯು ಉತ್ತರ ಕರ್ನಾಟಕದ ಒಳನಾಡನ್ನು ಪಶ್ಚಿಮ ಕರಾವಳಿಗೆ ಸಂಪರ್ಕ ಕಲ್ಪಿಸುವುದರಿಂದ ಉತ್ತರ ಕರ್ನಾಟಕದ ಹಿಂದುಳಿದ ಪ್ರದೇಶದ ಅಭಿವೃದ್ಧಿಯ ದೃಷ್ಟಿಯಿಂದ ಅತಿ ಪ್ರಾಮುಖ್ಯವಾದ ಯೋಜನೆಯಾಗಿದ್ದು, ಡಿಸೆಂಬರ್ 2013 ರಲ್ಲಿ ಸ್ಥಳ ಪರಿವೀಕ್ಷಣೆ ನಡೆಸಿದ ಕೇಂದ್ರ ಉನ್ನತಾಧಿಕಾರ ಸಮಿತಿಗೆ ಈ ರೈಲ್ವೆ ಮಾರ್ಗದ ಮಹತ್ವದ ಬಗ್ಗೆ ವಿವರಿಸಲಾಗಿದ್ದು, ಸಮಿತಿಯ ವರದಿಯಲ್ಲಿಯೂ ಸಹ ಉಲ್ಲೇಖಿಸಲಾಗಿದೆ. ಹುಬ್ಬಳ್ಳಿ-ಅಂಕೋಲಾ ನಡುವಿನ ರಾಷ್ಟ್ರೀಯ ಹೆದ್ದಾರಿ-63ರ ಸಾಮರ್ಥ್ಯವು ಸೀಮಿತವಾಗಿದ್ದು, ರೈಲ್ವೆ ಮಾರ್ಗಕ್ಕಿಂತ ಹೆಚ್ಚಿನ ಪ್ರದೂಷಣೆ ಉಂಟು ಮಾಡುವ ಕಾರಣ

ಕಾರ್ಯಸಾಧ್ಯವಾದ ಪರ್ಯಾಯ ಮಾರ್ಗವಾಗಿರುವುದಿಲ್ಲ. ಈ ರೈಲ್ವೆ ಮಾರ್ಗದಿಂದ ಈ ಪ್ರದೇಶದಲ್ಲಿ ಅಭಿವೃದ್ಧಿಪಡಿಸುತ್ತಿರುವ ಸೀಬರ್ಡ್, ಕೈಗಾ ಅನುಸ್ಥಾವರ ಯೋಜನೆ, NMPT's ಉಷ್ಣ ವಿದ್ಯುತ್ ಸ್ಥಾವರ ಯೋಜನೆಗೆ ಸಹಕಾರಿಯಾಗುತ್ತದೆ.

ರಾಜ್ಯ ಸರ್ಕಾರವು ಕನಿಷ್ಟ ಅರಣ್ಯ ಹಾನಿಯ ಬಗ್ಗೆ ಬದ್ಧವಾಗಿದೆ ಮತ್ತು ಪರಿಹಾರ ಅರಣ್ಯ ಅಭಿವೃದ್ಧಿಪಡಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತಿದೆ. ರಾಷ್ಟ್ರೀಯ ಹಸಿರು ನ್ಯಾಯಾಧಿಕರಣವು ವಿಚಾರಣೆ ನಡೆಸಿ, ಯೋಜನೆಯ ಪ್ರತಿಪಾದಕರಾದ ರೈಲ್ವೆ ಇಲಾಖೆಗೆ ಮುಂದಿನ ಅಗತ್ಯ ಪರಿಶೀಲನೆ ನಡೆಸಲು ಪ್ರಸ್ತಾವನೆಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸುವಂತೆ ನಿರ್ದೇಶಿಸಿ ಅರ್ಜಿಯನ್ನು ವಿಲೇ ಮಾಡಿರುವ ಹಿನ್ನೆಲೆಯಲ್ಲಿ, ದಿನಾಂಕ:12.05.2016 ರಂದು ನೈರುತ್ಯ ರೈಲ್ವೆ ಇಲಾಖೆಯು ಮರುಪರಿಶೀಲಿಸಿ, ಕಾರವಾರ, ಯಲ್ಲಾಪುರ ಮತ್ತು ಧಾರವಾಡ ವಿಭಾಗದಲ್ಲಿ ಅಗತ್ಯವಿರುವ ಅರಣ್ಯ ಭೂಮಿಯನ್ನು 667 ಹೆಕ್ಟೆರ್ ರಿಂದ 594.64 ಹೆಕ್ಟೆರ್ ಗೆ ಕಡಿತಗೊಳಿಸಿ, ಆನ್‌ಲೈನ್‌ನಲ್ಲಿ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತದೆ. ಅರಣ್ಯ (ಸಂರಕ್ಷಣೆ) ಕಾಯ್ದೆ 1980ರ ಕಲಂ 2 ರನ್ವಯ ಅರಣ್ಯ ಭೂಮಿ ಡೈವರ್ಶನ್‌ಗೊಳಸಲು ರಾಜ್ಯ ಅರಣ್ಯ ಇಲಾಖೆಯು ಭಾರತ ಸರ್ಕಾರದ ಅರಣ್ಯ ಮತ್ತು ಪರಿಸರ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿರುತ್ತದೆ.

ಈ ಯೋಜನೆಗೆ ಅಗತ್ಯವಿರುವ 996 ಹೆಕ್ಟೆರ್ ಭೂಮಿಯ ಪೈಕಿ 595 ಹೆಕ್ಟೆರ್ ಅರಣ್ಯ ಭೂಮಿಯಾಗಿದ್ದು, ರಾಜ್ಯ ಸರ್ಕಾರವು ಈಗಾಗಲೇ 225.84 ಹೆಕ್ಟೆರ್ ಖಾಸಗಿ ಭೂಮಿಯನ್ನು ರೈಲ್ವೆ ಇಲಾಖೆಗೆ ಹಸ್ತಾಂತರಿಸಿರುತ್ತದೆ. 741.84 ಹೆಕ್ಟೇರ್ ಭೂಮಿಯು ಹಸ್ತಾಂತರಿಸಲು ಬಾಕಿ ಇರುತ್ತದೆ ಹಾಗೂ ಉಳಿಕೆ ಭೂಮಿಯನ್ನು ಪರಿಸರ ಮತ್ತು ಅರಣ್ಯ ಮಂತ್ರಾಲಯವು ಈ ಬಗ್ಗೆ ಕ್ಲಿಯರೆನ್ಸ್ ನೀಡಿದ ನಂತರ ಹಸ್ತಾಂತರಿಸಲಾಗುವುದು ಹಾಗೂ 142 ಹೆಕ್ಟೆರ್ ಖಾಸಗಿ ಭೂಮಿಯನ್ನು ರೈಲ್ವೆ ಮಂತ್ರಾಲಯದಿಂದ ಬೇಡಿಕೆ ಬಂದ ನಂತರ ಕೂಡಲೇ ಸದರಿ ಭೂಮಿಯನ್ನು ಭೂಸ್ವಾಧೀನಪಡಿಸಿಕೊಳ್ಳಲು ಪ್ರಸ್ತಾಪಿಸಿದೆ. .

ಈ ಯೋಜನೆಗೆ ಸಂಬಂಧಿಸಿದಂತೆ ಭೂಮಿಯು ಪಶ್ಚಿಮ ಘಟ್ಟದಲ್ಲಿರುವುದರಿಂದ, RECಯ ಶಿಫಾರಸ್ಸುಗಳನ್ವಯ ಪ್ರಸ್ತಾವಿತ ಅರಣ್ಯ ಭೂಮಿಯನ್ನು ಡೈವರ್ಶನ್‌ಗೊಳಸಲು ರಾಜ್ಯ ಸರ್ಕಾರವು ಪರಿಸರ ಮತ್ತು ಅರಣ್ಯ ಮಂತ್ರಾಲಯವನ್ನು ದಿನಾಂಕ:9.11.2017 ರ ಪತ್ರದಲ್ಲಿ ಕ್ಲಿಯರೆನ್ಸ್ ನೀಡಲು ಕೋರಲಾಗಿದ್ದು, State BWL has recommended the proposal with the condition that the migration measures suggested by IISC Bangalore must be strictly implemented. And the post facto approval of the project will be taken in the forthcoming meeting of the SBWL ಎಂದು ಅರಣ್ಯ ಮಂತ್ರಾಲಯವು ತಿಳಿಸಿದ್ದು, ದಿನಾಂಕ:09.01.2019ರಂದು ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ 11ನೇ State Board for Wild Life ಸಭೆಯಲ್ಲಿ the Board decided to defer the subject as the facts before the Board were insufficient to take a decision on the subject ಎಂದು ತಿಳಿಸಿದೆ.

7. **ರಸ್ತೆ ಮೇಲು / ಕೆಳ ಸೇತುವೆ ನಿರ್ಮಾಣ ಕಾಮಗಾರಿಗಳು:**

ರಾಜ್ಯ ಸರ್ಕಾರವು ರೈಲ್ವೆ ಮಂತ್ರಾಲಯದೊಂದಿಗೆ ವೆಚ್ಚ ಹಂಚಿಕೆ ಆಧಾರದ ಮೇಲೆ 40 ಲೆವೆಲ್ ಕ್ರಾಸಿಂಗ್ ಗೇಟ್‌ಗಳಲ್ಲಿ ರಸ್ತೆ ಮೇಲು/ಕೆಳಸೇತುವೆ ನಿರ್ಮಾಣಕ್ಕಾಗಿ ಒಟ್ಟು ಅಂದಾಜು ವೆಚ್ಚ ರೂ.8742.32 ಕೋಟಿಗಳಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಿ ಈವರೆವಿಗೂ 4871.23 ಕೋಟಿಯನ್ನು ಬಿಡುಗಡೆಗೊಳಸಲಾಗಿದೆ. ರೈಲ್ವೆ ಇಲಾಖೆಯು ರಾಜ್ಯದಲ್ಲಿ ಒಟ್ಟಾರೆ 08 ರಸ್ತೆ ಮೇಲುಸೇತುವೆ / ಕೆಳಸೇತುವೆಯನ್ನು ಪೂರ್ಣಗೊಳಸಿದ್ದು, ಉಳದ ಕಾಮಗಾರಿ ಪ್ರಗತಿಯಲ್ಲಿದೆ

8. **ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ನಿಯಮಿತ, ಕೆ-ರೈಡ್:**

ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ(ಕರ್ನಾಟಕ) ನಿಯಮಿತ, ಕೆ-ರೈಡ್, ಇದನ್ನು ರೈಲ್ವೆ ಮಂತ್ರಾಲಯ ಮತ್ತು ಕರ್ನಾಟಕ ಸರ್ಕಾರ ಇವುಗಳ ನಡುವೆ ಒಂದು ಜಂಟಿ ಸಹಭಾಗಿತ್ವ ಕಂಪನಿಯಾಗಿ ಕರ್ನಾಟಕದಲ್ಲಿನ ರೈಲ್ವೆ ಯೋಜನೆಗಳನ್ನು ಗುರುತಿಸುವ ಮತ್ತು ಅವುಗಳ ಅನುಷ್ಠಾನ ಕಾರ್ಯವನ್ನು ಕೈಗೊಳ್ಳುವ ಸಲುವಾಗಿ ಸ್ಥಾಪಿಸಲಾಯಿತು.

9. **ಪಿಪಿಪಿ ಕೋಶ:**

9.1 ಪಿಪಿಪಿ ಕೋಶವು ಆಡಳತ ತರಬೇತಿ ಸಂಸ್ಥೆ, ಮೈಸೂರು ಇವರ ಮೂಲಕ ಸರ್ಕಾರದ ವಿವಿಧ ಆಡಳತ ಇಲಾಖೆ / ಸಂಸ್ಥೆಗಳ ಅಧಿಕಾರಿಗಳಗೆ ಪಿಪಿಪಿ ಮಾದರಿಯ ಯೋಜನಾ ಅನುಷ್ಠಾನ ಕುರಿತಂತೆ ತರಬೇತಿ ನೀಡಲು ಸಾಮರ್ಥ್ಯ ಬಲವರ್ಧನೆ ತರಬೇತಿಗಳನ್ನು ಏರ್ಪಡಿಸುತ್ತದೆ. 2018-19ನೇ ಸಾಲಿನಲ್ಲಿ ಒಟ್ಟು 14 ಕಾರ್ಯಕ್ರಮಗಳನ್ನು ಏರ್ಪಡಿಸಿದ್ದು, ಈ ಕಾರ್ಯಕ್ರಮಗಳಲ್ಲಿ ಒಟ್ಟು 389 ಅಧಿಕಾರಿಗಳು ಭಾಗವಹಿಸಿರುತ್ತಾರೆ. ಈ ಪೈಕಿ 89 ಮಹಿಳಾಧಿಕಾರಿಯಾಗಿರುತ್ತಾರೆ.

9.2 ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯಲ್ಲಿರುವ ಪಿಪಿಪಿ ಕೋಶವು ರಾಜ್ಯ ಸರ್ಕಾರದ ಸಂಸ್ಥೆಗಳಗೆ ಅವಶ್ಯಕತೆಗನುಸಾರವಾಗಿ ಪಿಪಿಪಿ ಯೋಜನೆಯ ಅಭಿವೃದ್ಧಿ ಹಂತಗಳಾದ ಪೂರ್ವ ಕಾರ್ಯಸಾಧ್ಯತಾ ವರದಿಗಳ ತಯಾರಿಕೆ, ಸಮಾಲೋಚಕರ ಆಯ್ಕೆ, ಬಿಡ್‌ಗಳ ಮೌಲ್ಯಮಾಪನ, ಭಾರತ ಸರ್ಕಾರದಿಂದ ಅನುದಾನವನ್ನು ಪಡೆಯಲು ಸಹಕರಿಸುತ್ತದೆ.

9.3 ಲೆಕ್ಕ ಶೀರ್ಷಿಕೆ: 5465-01-190-1-20-211-ಕರ್ನಾಟಕ ಸ್ಥಿತ್ಯಂತರ ಬಂಡವಾಳ ಹೂಡಿಕೆ ಅಡಿಯಲ್ಲಿ 2018-19ನೇ ಸಾಲಿನಲ್ಲಿ ರೂ.30.00 ಕೋಟಿಗಳ ಅನುದಾನವನ್ನು ಯಲಹಂಕ – ಆಂಧ್ರ ಪ್ರದೇಶ್ ಗಡಿ ರಸ್ತೆ ಯೋಜನೆಗೆ ಬಿಡುಗಡೆ ಮಾಡಲಾಗಿದೆ.

*****